ಸ್ಕಾಟ್ಲೆಂಡಿನ ಖ್ಯಾತ ವಿನ್ಯಾಸಗಾರ ವ್ಯಾನ್ ಕೂಪರ್ ಅವರು. ಕಂಪ್ಯೂಟರ್ ಪ್ರಯೋಗಶಾಲೆಗಳ ತಯಾರಿ ಮಾಡಿದವರು ಇನ್ಫೋಸಿಸ್ ಸಂಸ್ಥೆ. ಇಸ್ರೋ ಸಂಸ್ಥೆ ಆಧುನಿಕ ರೀತಿಯ ಟೆಲಿಸ್ಕೋಪ್ ಕೊಡುಗೆ ನೀಡಿದೆ ಮತ್ತು ಪ್ರಯೋಗ ಶಾಲೆಗಳ ನಿರ್ಮಾಣಕ್ಕೆ ಮಾರ್ಗದರ್ಶನ ನೀಡಿದೆ. ಶಾಲೆಯ ಭೇಟಿ ನೀಡಿದ ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರಹಮಾನ್ ತಮ್ಮ ಕೊಡುಗೆಯಾಗಿ ನೀಡಿದ ಸಂಗೀತಶಾಲೆಯ ಕಟ್ಟಡದ ಕಾಮಗಾರಿ ಇದೀಗ ಪ್ರಗತಿಯಲ್ಲಿದೆ.

## ಫೈಝುಲ್ ಮತ್ತು ಶಬಾನಾ ಫೌಂಡೇಶನ್

ಫೈಝುಲ್ ಮತ್ತು ಶಬಾನಾ ಫೌಂಡೇಶನ್ ಕಲ್ಲಿಕೋಟೆ ಮೂಲದ ಫೈಝುಲ್ ಮತ್ತು ಪತ್ನಿ ಶಬಾನಾ ಅವರ ಸ್ಥಾಪನೆ. ಶಬಾನಾ ಅವರು ಮಂಗಳೂರಿನ ಸಮೀಪದ ತುಂಬೆಯವರು. ಫೈಝುಲ್ ಯು.ಎ.ಇ. ದುಬೈ ಮುಖ್ಯ ಆಸ್ಥಾನವಾಗಿರುವ ಕೆ.ಇ.ಎಫ್.ಹೋಲ್ಡಿಂಗ್ಸ್ ಎಂಬ ಸಮೂಹ ಸಂಸ್ಥೆಗಳ ಸ್ಥಾಪಕರು. ಮೆಕ್ಯಾನಿಕಲ್ ಎಂಜಿನಿಯರ್ ಆದ ಫೈಝುಲ್ 1997ರಲ್ಲಿ ಅರಬ್ ರಾಷ್ಟ್ರಕ್ಕೆ ತೆರಳಿ ಶಾರ್ಜಾದಲ್ಲಿ ತಮ್ಮ ಮೊದಲ ಉದ್ದಿಮೆ ಎಮಿರೇಟ್ಸ್ ಟೆಕ್ನೋ ಕ್ಯಾಸ್ಟಿಂಗ್ಸ್ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರು. ತಮ್ಮ ಪ್ರಾಮಾಣಿಕ ಶ್ರಮದಿಂದ ಈ ಸಂಸ್ಥೆಯನ್ನು ಎತ್ತರಕ್ಕೆ ಏರಿಸಿದ ಫೈಝುಲ್ ವರ್ಷಗಳು ಕಳೆದಂತೆ ತಮ್ಮ ಉದ್ದಿಮೆಯನ್ನು ವಿಸ್ತರಿಸಿದರು. ಇಂದು ಕೆ.ಇ.ಎಫ್.ಹೋಲ್ಡಿಂಗ್ಸ್ ಸಂಸ್ಥೆಗಳು ನಿರ್ಮಾಣ, ಆರೋಗ್ಯ, ಹೂಡಿಕೆ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿವೆ. ಮಂಗಳೂರಿನ ಯೆನಪೋಯ ಸಂಸ್ಥೆಯ ವಸತಿಗೃಹಗಳನ್ನು ನಿರ್ಮಾಣ ಮಾಡಿದ್ದು ಇದೇ ನಿರ್ಮಾಣ ಸಂಸ್ಥೆ.

ಯಶಸ್ಸು ಮತ್ತು ಹಣ ಎರಡನ್ನೂ ಗಳಿಸಿದ ಫೈಝುಲ್ ಮತ್ತು ಶಬಾನಾ ಅವರಿಗೆ ತಮಗೆ ಸಿಕ್ಕ ಈ ಸಂತಸ ಮತ್ತು ಯಶಸ್ಸನ್ನು ಅಷ್ಟೇನೂ ಗಳಿಸದವರೊಂದಿಗೆ ಮತ್ತು ಇನ್ನೂ ಸಹಾಯ ಅಗತ್ಯವಿರುವವರೊಂದಿಗೆ ಹಂಚಿಕೊಳ್ಳಬೇಕು ಎಂದು ಅನ್ನಿಸಿದ್ದರ ಫಲವೇ 2007ರಲ್ಲಿ ಹುಟ್ಟಿಕೊಂಡ ಫೈಝುಲ್ ಮತ್ತು ಶಬಾನಾ ಫೌಂಡೇಶನ್. ಫೈಝುಲ್ ಮತ್ತು ಶಬಾನಾ ಪ್ರತಿಷ್ಠಾನ 'ನೀಡುವುದು' ಎಂಬ ಮಾಂತ್ರಿಕ ಕ್ರಿಯೆಯಲ್ಲಿ ನಂಬಿಕೆಯಿಟ್ಟಿದೆ. ಒಂದು ಸ್ಪರ್ಶ, ಒಂದು ಸಣ್ಣ ನೆರವು ಸುತ್ತಲಿನ ಸಮಾಜವನ್ನು ಮೇಲೆತ್ತ ಬಹುದು. ಕೇವಲ ಹಣ ನೀಡುವುದರಿಂದ ಸಮಸ್ಯೆಗಳು ಮಾಯವಾಗುವುದಿಲ್ಲ. ಸಮಸ್ಯೆಗಳ ಕಾರಣವನ್ನು ಅರ್ಥ ಮಾಡಲು ಜನರೊಡನೆ ಮನಬಿಚ್ಚಿ ಮಾತನಾಡಬೇಕಾಗಿದೆ, ಗೋಡೆಗಳು ಕರಗಬೇಕಿದೆ. ಇಂದು ಫೈಝುಲ್ ಮತ್ತು ಶಬಾನಾ ಫೌಂಡೇಶನ್ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನೇಕರಿಗೆ ಭರವಸೆಯ ಬೆಳಕಾಗಿದೆ. ಆಟಿಸಂ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳಿಗಾಗಿ ಕೇಂದ್ರಾಡಳಿತ ಪ್ರದೇಶವಾದ ಮಾಹಿ ಎಂಬಲ್ಲಿ 'ಸಫಿಯಾ ಆಟಿಸಂ ಫೌಂಡೇಶನ್' ಎಂಬ ಸಂಸ್ಥೆಯನ್ನು ತೆರೆದಿದೆ. ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಎಣ್ಣೆಗೋಲ್ ಪಂಚಾಯತಿಯ 8 ಹಳ್ಳಿಯ ಸಮಗ್ರ ಅಭಿವೃದ್ಧಿಗೆ ಮುಂದಾಗಿದೆ. ನಡಕ್ಕಾವು ಶಾಲೆಯ ಅಭಿವೃದ್ಧಿಗಾಗಿ ಈ ಪ್ರತಿಷ್ಠಾನ ಹದಿನೈದು ಕೋಟಿಗೂ ಹೆಚ್ಚು ಹಣವನ್ನು ವ್ಯಯಿಸಿದೆ.

'ಇಂದು ನಮ್ಮ ಶಾಲೆಗೆ ಪ್ರವೇಶಕ್ಕಾಗಿ ಬರುವ ಅರ್ಜಿಗಳ ಸಂಖ್ಯೆ ಹೆಚ್ಚಿದೆ. ಆದರೂ ಶಾಲೆಯ ಮೂರು ಕಿಲೋಮೀಟರ್ ವ್ಯಾಪ್ತಿ ಒಳಗಿನ ವಿದ್ಯಾರ್ಥಿ ಗಳಿಗೆ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತದೆ. ಅಕ್ಕ ಇದೇ ಶಾಲೆಯ ವಿದ್ಯಾರ್ಥಿನಿಯಾಗಿದ್ದರೆ ತಂಗಿಗೆ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ. ಕಳೆದೆರಡು ವರ್ಷಗಳಿಂದ ಪ್ರತ್ಯೇಕ ಸಾಫ್ಟ್‌ವೇರ್ ಸಹಾಯದಿಂದ ಪ್ರವೇಶ ನಡೆಯುತ್ತಿದೆ ಮತ್ತು ಫೈಝುಲ್ ಮತ್ತು ಶಬಾನಾ ಫೌಂಡೇಶನ್ ಈ ವಿಷಯದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ. ವಿದ್ಯಾರ್ಥಿನಿಯರ ಆಂಗ್ಲಭಾಷೆಯ ಪರಿಣತಿಗಾಗಿ ಒಬ್ಬ ಶಿಕ್ಷಕಿಯನ್ನು ಈ ಫೌಂಡೇಶನ್ ಸ್ವಂತ ಖರ್ಚಿನಲ್ಲಿ ನೇಮಕ ಮಾಡಿದೆ. ಫೌಂಡೇಶನ್‌ನ ಮುಖ್ಯಸ್ಥರಾದ ಡಾ.ಸೆಬಾಸ್ಟಿಯನ್ ಜೋಸೆಫ್ ಅವರು ಮೇಲ್ತೋಟ ವಹಿಸುತ್ತಿದ್ದಾರೆ ಮತ್ತು ಇನ್ನೂ ಮೂರು ವರ್ಷ ಮುಂದುವರಿಯುತ್ತದೆ. ನಂತರ ಶಿಕ್ಷಕ ರಕ್ಷಕ ಸಂಘ ಇದರ ಸಂಪೂರ್ಣ ಮೇಲ್ತೋಟ ವಹಿಸಲಿದೆ. ಕಲ್ಲಿಕೋಟೆ ಐ.ಐ.ಎಂ ಶಿಕ್ಷಕರಿಗೆ ಆಗಾಗ ಹೆಚ್ಚಿನ ತರಬೇತಿ ನೀಡುತ್ತದೆ.' ಎನ್ನುತ್ತಾರೆ ಈ ಶಾಲೆಯ ಹೆಡ್ ಮಾಸ್ಟರ್.

ಪ್ರಿಸಂ ಹಾಗೂ ಫೈಝುಲ್ ಮತ್ತು ಶಬಾನಾ ಫೌಂಡೇಶನ್ ಉನ್ನತಿ




ಫೈಝುಲ್ ಮತ್ತು ಶಬಾನಾ

ಗೇರಿಸಿದ್ದು ಕೇವಲ ಇಲ್ಲಿನ ಕಟ್ಟಡಗಳನ್ನಷ್ಟೇ ಅಲ್ಲ, ಈ ವಿದ್ಯಾರ್ಥಿನಿಯರ ಆತ್ಮ ಗೌರವವನ್ನೂ ಕೂಡ. ಅವರ ಮನದಲ್ಲಿ ತಾವೇನೂ ಇತರರಿಗಿಂತ ಕೀಳಲ್ಲ, ತಮಗೂ ದೊಡ್ಡ ಕನಸುಗಳನ್ನು ಕಾಣುವ ಅರ್ಹತೆ ಇದೆ ಎಂಬ ಭರವಸೆಯ ಬೀಜ ಬಿತ್ತಿದ್ದಾರೆ. ಅನೇಕರು ಕೀಳರಿಮೆಯ ಬದಲು ಕೆಚ್ಚಿನಿಂದ ತಲೆಯೆತ್ತಿ ನಿಲ್ಲುವಂತೆ ಮಾಡಿದ್ದಾರೆ.

ಭಾರತದಲ್ಲೇ ಅತ್ಯುತ್ತಮ ಹತ್ತು ಸರಕಾರೀ ಶಾಲೆಗಳಲ್ಲಿ ನಡಕ್ಕಾವು ಕೂಡ ಸ್ಥಾನ ಪಡೆದಿದೆ. ಈ ಶಾಲೆಯ ಅಂಗಳದಲ್ಲಿ ನಿಂತಂತೆ ಅದೇನೋ ಸಮಾಧಾನದ,

ಮೆಟ್ರೋ ನಗರಗಳಲ್ಲಿ, ಸಣ್ಣ ಪಟ್ಟಣಗಳಲ್ಲೂ ತೆರೆದು ನಿಂತ ಪಬ್ಲಿಕ್ ಸ್ಕೂಲ್‌ಗಳು. ಸಾವಿರ, ಲಕ್ಷಗಳಲ್ಲಿ ಏರಿ ನಿಂತ ಪ್ರವೇಶದ ಶುಲ್ಕಗಳು. ವರ್ಷದ ಅನೇಕ ಸಲ ಮತ್ತೆ ಅದೆಷ್ಟೋ ತರದ ಶುಲ್ಕಗಳು. ಎಲ್ಲ ವಿದ್ಯಾರ್ಥಿಗಳ ಪೋಷಕರೂ ಸ್ಥಿತಿವಂತರೇ? ಜೂನ್ ತಿಂಗಳು ಬಂತೆಂದರೆ ಪ್ರವೇಶದ ಹಣ ಹೊಂದಿಸಲು ಹೆಣಗಾಡುವ ಅದೆಷ್ಟು ಪೋಷಕರಿಲ್ಲ ಹೇಳಿ? ಎಲ್ಲ ಪೋಷಕರ ಕನಸು ತಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು, ಅವರು ಮುಂದೆ ಆತ್ಮವಿಶ್ವಾಸದಿಂದ ಬದುಕಬೇಕು ಎಂಬುದೇ ಆಗಿದೆ ನಾಲ್ಕು ಜನರ ಮುಂದೆ ಹೇಳಲೂ ಕೀಳರಿಮೆ ಹುಟ್ಟಿಸುವ, ಭವಿಷ್ಯದ ಬಗ್ಗೆ ಭರವಸೆ ಕೊಡದ ಸರಕಾರಿ ಶಾಲೆಗಳನ್ನು ಇವರೆಲ್ಲ ಆಯ್ಕೆ ಮಾಡಿಕೊಳ್ಳುವುದಾದರೂ ಹೇಗೆ? ಇಂಥ ಅನುಮಾನಗಳ, ಅಸಡ್ಡೆಗಳ ಕತ್ತಲನ್ನು ಸೀಳಿದ ಬೆಳಕಂತೆ ಕಾಣಿಸುತ್ತಿದೆ ಈ ಸರ್ಕಾರೀ ಪಬ್ಲಿಕ್ ಸ್ಕೂಲ್.